# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ | ಕಾರ್ತಿಕ | ಅಕ್ಟೋಬರ್ ೨೦೦೯ | ಸಂಪುಟ–೩ | ಸಂಚಿಕೆ–೧೦


## ಗುರುವಾಣಿ



### ಹೂರಣ


ಗುರುವಾಣಿ

ಪ್ರಶ್ನೋತ್ತರ

ಮಾಸದ ಗೋವು: ಕೇನ್‌ಕಾಥ ಅಥವಾ ಕೇನ್ವಾರಿಯ

ಯಾತ್ರೆಯ ನಂತರ ನಮ್ಮ ದಾರಿ, ಪಾತ್ರ, ಪ್ರಯತ್ನ



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




# ವಿಶ್ವ ಮಂಗಳ ಗೋ ಗ್ರಾಮ ಯಾತ್ರೆ
# ಪೊರೆದ ತಾಯಿಯ ಅಳಿಲು ಸೇವೆಗೊಂದು ಸೋಪಾನ

ಪುರಾಣ ಪ್ರಸಿದ್ಧ ಕುರುಕ್ಷೇತ್ರದಲ್ಲಿ ಗೋ–ಗ್ರಾಮಗಳ ಉತ್ಥಾನದ ಮಹಾಶಂಖನಾದವಾಗಿದೆ. ಹೌದು, ಅದೇ ವಿಶ್ವ ಮಂಗಳ ಗೋ ಗ್ರಾಮ ಯಾತ್ರೆಯ ಮಂಗಳ ನಾದ – ವಂದೇ ಗೋ ಮಾತರಂ, ಎಲ್ಲೆಲ್ಲೂ ಮೊಳಗಲು ಪ್ರಾರಂಭವಾಗಿದೆ.

ಕಳೆದ ಸೆಪ್ಟೆಂಬರ್ 30ರಂದು ಕುರುಕ್ಷೇತ್ರದಲ್ಲಿ ಅನಾವರಣಗೊಂಡ ಯಾತ್ರೆ ದೇಶದ ಮೂಲೆಮೂಲೆಗಳಲ್ಲಿ ಸಂಚರಿಸಿ, ಗೋ ಸಂರಕ್ಷಣೆಯ ದಿವ್ಯ ಸಂದೇಶವನ್ನು ಎಲ್ಲೆಲ್ಲೂ ಮೊಳಗಿಸುತ್ತಿದೆ.

ಅಲ್ಲಿಂದ ಹೊರಟ ಯಾತ್ರೆ ಹರಿಯಾಣ, ರಾಜಸ್ಥಾನ್, ಪಂಜಾಬ್ ಮೂಲಕ ಭಾರತ ಮಕುಟಮಣಿ, ಭರತ ಭೂಮಿಯ ತಿಲಕ ಜಮ್ಮುವನ್ನು ತಲುಪಿತು. ಭಯವೇ ಎಲ್ಲೆಲ್ಲೂ ನೆಲೆಸಿರುವ ಆ ರಾಜ್ಯದಲ್ಲಿಯೂ ಗೋವಿಗಾಗಿ ಮಿಡಿಯುವ ಒಂದಷ್ಟು ಹೃದಯಗಳು ಒಟ್ಟಾಗಿ ಗೋ ಸಂರಕ್ಷಣಾ ಸಂಕಲ್ಪ ಬದ್ಧರಾಗಿದ್ದು ಹರ್ಷವನ್ನುಂಟುಮಾಡಿತು.

ಹಾಗೆಯೇ ಯಾತ್ರೆ ಮುಂದುವರೆದು ಹಿಮಾಚಲಪ್ರದೇಶವನ್ನು ತಲುಪಿದಾಗಲೂ ಅದೇ ಅನುಭವ. ಕೊರೆಯುವ ಚಳಿಯ ಮಧ್ಯದಲ್ಲಿಯೂ ನೂರಾರು ಜನ ಸಂಕಲ್ಪಬದ್ಧರಾದರು. ನಂತರ ಎದುರಾಗಿದ್ದು ಉತ್ತರ ಪ್ರದೇಶದ ಭಾವ ಪರಾಕಾಷ್ಠೆ. ಹೀಗೆ ಒಂದೊಂದು ರಾಜ್ಯವೂ ವಿಶಿಷ್ಟವಾಗಿ ಯಾತ್ರೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಿದೆ.

ಯಾತ್ರೆ ಮುಂದಿನ ದಿನಗಳಲ್ಲಿ ದಕ್ಷಿಣದ ಕಡೆಗೆ ಬಂದು, ಮತ್ತೆ ಉತ್ತರದ ಕಡೆಗೆ ಹೊರಳಿ, ಮಧ್ಯದಲ್ಲಿ (ಮಧ್ಯ ಭಾರತದಲ್ಲಿ) ಸಂಪನ್ನಗೊಳ್ಳಲಿದೆ.

ಯಾತ್ರೆ ನಮ್ಮೆಲ್ಲರ ಮನೆಯಂಗಳದಲ್ಲಿ ಸಾಗುವಾಗ, ನಾವೆಲ್ಲರೂ ಯಾತ್ರೆಯೊಂದಿಗಿದ್ದು, ಹಸ್ತಾಕ್ಷರ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಗೋವಿಗೆ ರಾಷ್ಟ್ರಮಾತೆಯ ಸ್ಥಾನಮಾನಗಳನ್ನು ಒದಗಿಸುವಲ್ಲಿ ಸಕ್ರಿಯವಾಗಿ ತೊಡಗಿಕೊಂಡು, ಪೊರೆದ ತಾಯಿಯ ಅಳಿಲು ಸೇವೆಯನ್ನು ಮಾಡುವ ಅವಕಾಶ ಒದಗಿಬಂದಿದೆ.

ಯಾರೊಬ್ಬರೂ ಅವಕಾಶ ವಂಚಿತರಾಗದಿರಿ. ಎಲ್ಲರಿಗೂ ಒಳ್ಳೆಯದಾಗಲಿ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

# ಪ್ರಶ್ನೋತ್ತರ

ಪ್ರ: ಹಸುಗಳನ್ನು ಕೊಲ್ಲುವುದು ಹಾಗೂ ಮಾಂಸ ಮಾರಾಟ ಮಾಡುವುದು ದೇಶದ ದೃಷ್ಟಿಯಿಂದ ಲಾಭದಾಯಕವೇ?

ಉ: ಹಸುಗಳು ಕೇವಲ ಹಾಲು ಕೊಡುವ ಯಂತ್ರಗಳು ಎಂದು ಭಾವಿಸುವ ಪಶ್ಚಿಮದ ಅಭಿಪ್ರಾಯ ಭಾರತದ ಸಂದರ್ಭದಲ್ಲಿ ಶುದ್ಧ ಅವಿವೇಕ. ಅವು ಜೀವಮಾನವಿಡೀ ನೀಡುವ ಗೋಮಯ ಹಾಗೂ ಗೋಮೂತ್ರದ ಮೌಲ್ಯವನ್ನು ಅರಿತಾಗ ಈ ಅವಿವೇಕ ನಿವಾರಣೆಯಾಗುತ್ತದೆ. ಒಂದು ಹಸುವನ್ನು ಕೊಂದರೆ ಮಾಂಸ, ರಕ್ತ, ಮೂಳೆ, ಚರ್ಮ, ಇವುಗಳ ಮೂಲಕ ದೊರೆಯುವ ಆದಾಯ ಸುಮಾರು 10 ಸಾವಿರ ರೂ ಗಳು. ಆದರೆ ಅದನ್ನು ಸಾಕಿದರೆ ಸಗಣಿ, ಗಂಜಲಗಳ ಮೂಲಕ ಅದರ ಜೀವಮಾನದಲ್ಲಿ (20 ವರ್ಷ) ದೊರೆಯುವ ಆದಾಯ ಸುಮಾರು 40 ಲಕ್ಷ ರೂ ಗಳು. ಈಗ ನೀವೇ ಹೇಳಿ. ಯಾವುದು ಲಾಭಕರ? ಕೊಲ್ಲುವುದೋ? ಸಾಕುವುದೋ?

ಪ್ರ: ಗೋಸಂರಕ್ಷಣೆ ಬಗ್ಗೆ ತಜ್ಞ ಅಭಿಪ್ರಾಯ ಏನು?

ಉ: ಆಗಸ್ಟ್ 2001 ರಲ್ಲಿ ಭಾರತದ ಆರ್ಥಿಕತೆಯಲ್ಲಿ ಗೋವುಗಳ ಪ್ರಾಮುಖ್ಯವನ್ನು ಅಧ್ಯಯನ ಮಾಡಿ ಅಗತ್ಯ ಕ್ರಮಗಳ ಬಗ್ಗೆ ವರದಿ ನೀಡಲು ಭಾರತ ಸರಕಾರವು 17 ಜನ ಪರಿಣತರ ರಾಷ್ಟ್ರೀಯ ಜಾನುವಾರು ಆಯೋಗವನ್ನು ಸ್ಥಾಪಿಸಿತು. ಅದರ ಕೆಲವು ಸಲಹೆಗಳೆಂದರೆ:

1. ಗೋವಂಶದ ಪ್ರಾಣಿಗಳ (ಕಾರುಗಳು, ಎತ್ತುಗಳು, ಹೋರಿಗಳು) ಹತ್ಯೆ ನಿಷೇಧವನ್ನು ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸೇರಿಸಬೇಕು.

2. ಪಾರ್ಲಿಮೆಂಟ್ ಬಿಗಿಯಾದ ಸಂಪೂರ್ಣ ಗೋಹತ್ಯಾ ನಿಷೇಧ ಕಾಯಿದೆಯನ್ನು ಜಾರಿಗೊಳಿಸಬೇಕು ಹಾಗೂ ಗೋವುಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವುದನ್ನು ನಿಷೇಧಿಸಬೇಕು.

3. ಕೇಂದ್ರದ ಗೋಹತ್ಯಾ ನಿಷೇಧ ಕಾಯ್ದೆಯು ಎಲ್ಲಾ ರಾಜ್ಯಗಳಿಗೂ ಕಡ್ಡಾಯವಾಗಿ ಅನ್ವಯವಾಗಬೇಕು. ಗೋಹತ್ಯೆಯನ್ನು ಜಾಮೀನು ರಹಿತ ಸಂಜ್ಞೆಯ ಅಪರಾಧ ಎಂದು ಪರಿಗಣಿಸಬೇಕು.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 25ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com



ಮಾಸದ ಗೋವು

# ಕೇನ್‌ಕಾಥ ಅಥವಾ ಕೇನ್ವಾರಿಯ

**ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ ರಾಜ್ಯಗಳಲ್ಲಿ ಉತ್ತಮ ಕೆಲಸಗಾರ ತಳಿ ಎಂದು ಖ್ಯಾತವಾದ ಕೇನ್‌ಕಾಥ ಅಥವಾ ಕೇನ್ವಾರಿಯ ಈ ತಿಂಗಳ ಮಾಸದ ಗೋವು. ಒಣ ಪ್ರದೇಶದಲ್ಲಿ ದೊರಕುವ ಅತಿ ಕಡಿಮೆ ಹುಲ್ಲು ಆಹಾರಕ್ಕೆ ಹೊಂದಿಕೊಂಡು ರೈತನ ಬೆನ್ನೆಲುಬಾದ ತಳಿ ಇದು.**

ಕೇನ್‌ಕಾಥ ಅಥವಾ ಕೇನ್ವಾರಿಯ ಅನ್ನುವುದು ಕೇನ್ ನದಿಯ ದಂಡೆಗುಂಟ ಕಾಣಸಿಗುವ ಒಂದು ಅತ್ಯುತ್ತಮ ಕೆಲಸಗಾರ ಗೋತಳಿಯ ಹೆಸರು. ಕೇನ್ ನದಿ ಮಧ್ಯಪ್ರದೇಶದ ಬುಂದೆಲ್‌ಖಂಡ್, ಲಲಿತ್‌ಪುರ್, ಹಮಿರ್‌ಪುರ್ ಹಾಗು ಬಂದಾ ಜಿಲ್ಲೆಗಳಲ್ಲಿ ಹರಿಯುತ್ತದೆ. ಇದರ ದಂಡೆಗುಂಟ ಇರುವ ಹುಲ್ಲುಗಾವಲು ಪ್ರದೇಶಗಳಲ್ಲಿ ಕೇನ್‌ಕಾಥ ತಳಿ ಅಭಿವೃದ್ಧಿಗೊಂಡಿದೆ. ಕೇನ್‌ಕಾಥಕ್ಕೂ ನಮ್ಮ ಮಾಳ್ವೀ ತಳಿಗೂ ಬಹಳಷ್ಟು ಸಾಮ್ಯವಿದೆ.



**ಕೇನ್‌ಕಾಥ ಎತ್ತು, ಮಧ್ಯಪ್ರದೇಶ**

ಕೇನ್ ನದಿಯ ಆಸುಪಾಸಿನ ಪ್ರದೇಶ ಕೆಂಬೂದು ಬಣ್ಣದ ಮಣ್ಣನ್ನು ಹೊಂದಿದ ಫಲಹೀನ ಭೂಮಿ. ಇಲ್ಲಿನ ಸಾಗುವಳಿ ನೇಗಿಲಯೋಗಿಗೊಂದು ಸವಾಲು. ಕಪ್ಪು ಬಣ್ಣದ ಫಲವತ್ತಾದ ಭೂಮಿ ಕೇನ್ ಕೆಲಪ್ರದೇಶಗಳಲ್ಲಿ ಇದೆಯಾದರೂ ಅದರ ವ್ಯಾಪ್ತಿ ಕಡಿಮೆಯೆ. ಜೊತೆಗೆ, ಇಲ್ಲಿ ಬೆಳೆಯುವ ಹುಲ್ಲು ಗಿಡ್ಡನೆಯ ಗಾತ್ರದ ಪೌಷ್ಟಿಕಾಂಶವಿಲ್ಲದ ಬೇಗನೆ ಒಣಗಿಬಿಡುವ ಜಾತಿಯದ್ದಾದ್ದರಿಂದ ಇಲ್ಲಿ ಹೈನುಗಾರಿಕೆಯಿಂದಲಾಗಲೀ ಸಾಗುವಳಿಯಿಂದಲಾಗಲೀ ರೈತನ ಪಾಲಿಗೆ ಹೊಟ್ಟೆ ತುಂಬ ಅನ್ನ ದಕ್ಕುವುದು ಅಸಾಧ್ಯ ಎಂಬಂತ ಸ್ಥಿತಿ.

ಇಂತಹ ಪರಿಸ್ಥಿತಿಗೆ ಹೊಂದಿಕೊಂಡು ರೈತನ ಬೆನ್ನೆಲುಬಾಗಿದ್ದು ಕೇನ್ವಾರಿಯ. ಅತ್ಯಂತ ಕಡಿಮೆ ಆಹಾರವನ್ನು ನೀಡಿದಾಗ್ಯೂ ಅವುಗಳ ಬಲಿಷ್ಠ ಕಾಲುಗಳು ನೇಗಿಲ ಹೊರಲು ಹಿಂದೆಗೆಯುವುದಿಲ್ಲವೆಂಬ ಪ್ರಶಂಸೆ ಈ ತಳಿಗಿದೆ. ಇದು ಉತ್ಪ್ರೇಕ್ಷೆಯಲ್ಲ. ಮೇವಿಗಾಗಿ ದೂರ ದೂರದ ಹುಲ್ಲುಗಾವಲುಗಳನ್ನು ಹುಡುಕಿಹೋಗಬೇಕಾದ ಸ್ಥಿತಿಯಿರುವ ಈ ಪ್ರದೇಶದಲ್ಲಿ ಇಲ್ಲಿನ ಹವಾಗುಣ ಹಾಗು ಆಹಾರದ ಲಭ್ಯತೆಗೆ ಕೇನ್‌ಕಾಥ ಸಂಪೂರ್ಣವಾಗಿ ಹೊಂದಿಕೊಂಡಿದೆ. ಕಬ್ಬಿನ ಜಲ್ಲೆ, ಒಣ ಹುಲ್ಲುಗಳು ಮುಖ್ಯ ಆಹಾರ. ಕೇನ್ ನದೀ ಪಾತ್ರಗಳಲ್ಲಿ ಹಸುಗಳನ್ನು ದೊಡ್ಡ ದೊಡ್ಡಸಂಖ್ಯೆಯಲ್ಲಿ ಸಾಕುವುದು ಅಪರೂಪ. ಹೀಗಾಗಿ ಊರಿನ ಎಲ್ಲ ಹಸುಗಳನ್ನೂ ಪಾಳಿಯಲ್ಲಿ ಒಬ್ಬ ರೈತನೇ ನೋಡಿಕೊಳ್ಳುವ ವ್ಯವಸ್ಥೆ ಇದೆ.



**ಕೇನ್‌ಕಾಥ ದನ, ಮಧ್ಯಪ್ರದೇಶ**

ಕೇನ್‌ಕಾಥ ಹಸುಗಳು ಚಿಕ್ಕಗಾತ್ರದವು. ಬಣ್ಣ ಕತ್ತುಗಳ ಬಳಿ ಹೆಚ್ಚು ಸಾಂದ್ರವಾಗಿರುವ ಬೂದು. ಉಳಿದಂತೆ ಚಿಕ್ಕ ಕುತ್ತಿಗೆ, ವೃತ್ತಾಕಾರವಾಗಿ ಬಾಗಿದಂತಿರುವ ಕೋಡು, ಚೂಪು ಕಿವಿ, ಮಧ್ಯಮ ಗಾತ್ರ ಬಾಲ, 300ರಿಂದ 350 ಕೇಜಿ ತೂಕ, 125-140ಸೆ.ಮಿ ಎತ್ತರ ಇತ್ಯಾದಿ ಇತ್ಯಾದಿ.

ಭಾರತೀಯ ಗೋವಂಶದ ಇತರ ತಳಿಗಳಂತೆ ಇದೂ ಕೂಡ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ, ಅಳಿವಿನಂಚಿನಲ್ಲಿದೆ, ಸದ್ಯವೇ ಕ್ರಮ ಕೈಗೊಳ್ಳದಿದ್ದರೆ ಮುಂದೆ ಪಶ್ಚಾತ್ತಪಕ್ಕೆ ಒಳಗಾಗಬೇಕಾಗುತ್ತದೆ ಎನ್ನುವ ಮಾತುಗಳನ್ನು ಈ ಬಾರಿಯೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ.

**– ಮಧುಕೇಶ ದೊಡ್ಡೇರಿ**

**ಮೂಲ: ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ**
**ವಿಭಾಗ: ಕೆಲಸಗಾರ**
**ಧೃಡ ಶರೀರ**
**ಎತ್ತರ: ಸುಮಾರು ೧೨೫-೧೪೦ ಸೆ.ಮಿ.**
**ಬಣ್ಣ: ಸಾಂದ್ರ ಬೂದು**
**ಮುಖ: ಚೂಪು ಕಿವಿ**
**ಕೊಂಬು: ವೃತ್ತಾಕಾರವಾಗಿ ಬಾಗಿದ ಕೋಡು**
**ಕಾಲು: ಮಧ್ಯಮ ಗಾತ್ರ**

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

# ಯಾತ್ರೆಯ ನಂತರ ನಮ್ಮ ದಾರಿ, ಪಾತ್ರ, ಪ್ರಯತ್ನ

**ನಮ್ಮ ದಾರಿ :** ಯಾತ್ರೆ ಸಮಾಜ ಕಲ್ಯಾಣದ ಆರಂಭ ಅಷ್ಟೇ. ನಂತರದ ಸರದಿ ರಚನಾತ್ಮಕ ಕಾರ್ಯದ್ದು. ಹಲವು ಸವಾಲುಗಳಿವೆ. ಗೋವು ನಮಗೆ ದೇವೀ ಸ್ವರೂಪದಲ್ಲಿದೆ. ಹೌದು, ಅನುಮಾನವೇ ಇಲ್ಲ. ಆದರೆ, ಇಂದಿನ ವ್ಯಾವಹಾರಿಕ ಸನ್ನಿವೇಶದಲ್ಲಿ ಲಾಭವೇ ಎಲ್ಲದಕ್ಕೂ ಮಾನದಂಡವಾಗುತ್ತಿದೆ. ಲಾಭ ಆಗದ ಹೊರತು ಮುಂದಿನ ಮಾತಿಗೆ ಆಸ್ಪದವೇ ಇಲ್ಲ. ಆದ್ದರಿಂದ ಗೋವಿನಿಂದಾಗುವ ಹಣಕಾಸಿನ ಚಿಂತನೆಗೇ ಆದ್ಯತೆ ಕೊಟ್ಟು ಕೆಲಸ ಮಾಡುವುದು ಅನಿವಾರ್ಯವಾಗಿದೆ. ಅದಕ್ಕಾಗಿ ಗವ್ಯೋದ್ಯಮವನ್ನು ವ್ಯಾಪಕಗೊಳಿಸಿ, ಗೋಪಾಲನೆಯನ್ನು ಲಾಭಕರ ಮಾಡಿ, ಗೋ ಸಂರಕ್ಷಣೆ ಮಾಡುವ ವಿಶಿಷ್ಟ ಕಾರ್ಯ ಯೋಜನೆ ಸಿದ್ಧವಾಗುತ್ತಲಿದೆ.

**ನಮ್ಮ ಪಾತ್ರ :** ನಮ್ಮದು ಅಚ್ಚ ದಲ್ಲಾಳಿಯ ಪಾತ್ರ. ಅಂದರೆ ಗೋವಿನ ಪ್ರಯೋಜನವನ್ನು ಒಬ್ಬ ಶ್ರೀಸಾಮಾನ್ಯನಿಗೂ ಮನದಟ್ಟು ಮಾಡಿಸಿ, ಪ್ರತಿಯೊಬ್ಬರ ಮನೆಯಿಂದ ಗೋಪಾಲನೆಯ ಅಲೆ ಮೇಲೇಳುವಂತೆ ಮಾಡುವುದು. ಕೆಲವೇ ಕೆಲವು ಮಂದಿ ಕೋಟ್ಯಧೀಶರಾಗುತ್ತಾ, ಬಡವರು ಮತ್ತೂ ಬಡವರಾಗುವಂತಹ ದಾರಿಯನ್ನು ಹಿಡಿದಿಲ್ಲ. ಸಂಪತ್ತಿನ ತಿಳುವಳಿಕೆ ಹಾಗೂ ಅದರ ಸಮಾನ ಹಂಚಿಕೆ ಆಗಬೇಕೆಂಬುದೇ ನಮ್ಮ ಈ ಪಾತ್ರ ನಿರ್ವಹಣೆಯ ಆಶಯವಾಗಿದೆ.

**ನಮ್ಮ ಪ್ರಯತ್ನ :** ಉಳಿದಿರುವ 33 ಭಾರತೀಯ ಗೋತಳಿಗಳ ಸಂರಕ್ಷಣೆ, ಸಂವರ್ಧನೆಯ ಕಾರ್ಯವನ್ನು ಪರಿಣಾಮಕಾರಿಯಾಗಿ, ತುರ್ತಾಗಿ ಕೈಗೊಳ್ಳುವುದು. ಒತ್ತುವರಿಯಾದ ಗೋಮಾಳಗಳನ್ನೂ ಬಿಡಿಸಿಕೊಂಡು, ಗೋಮಾಳಗಳು ಸಾರ್ಥಕವಾಗುವಂತೆ ಮಾಡುವುದು.

ಯಾತ್ರೆಯ ಉದ್ದೇಶ -ನೇರ, ಸಾರ್ವಕಾಲಿಕ; ನಮ್ಮ ನಾಡಿನ ಹಿತದೃಷ್ಟಿಯಿಂದ ಅನಿವಾರ್ಯವೆಂಬ ಸಂಗತಿಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವುದು ಹಾಗೂ ನಂತರದ ಹೆಜ್ಜೆಗಳಿಗೆ ಪ್ರಯತ್ನಿಸುವುದು.




ನಿಜವಾಗಿ ಗೋ ಸಂರಕ್ಷಣೆ ಎಂಬುವುದು ಆಗುವುದಿದ್ದರೆ ಅದು ರೈತನ ಮನೆಯಿಂದ ಮಾತ್ರ. ಆದ್ದರಿಂದ ಗೋ ಆಧಾರಿತ ಜೀವನ, ಕೃಷಿ ದೀರ್ಘಕಾಲದಲ್ಲಿ ಬಹಳ ಪ್ರಯೋಜನಕಾರಿ ಎಂಬುದನ್ನು ರೈತನಿಗೆ ಮನವರಿಕೆ ಮಾಡಿಕೊಡುವುದು. ಸದ್ಯದ ಪರಿಸ್ಥಿತಿಯಲ್ಲಿ ಅದಕ್ಕಿಂತಲೂ ಮುಖ್ಯವಾಗಿ ಗೋಪಾಲನೆಯನ್ನು ಲಾಭದಾಯಕವಾಗಿಸಲೇಬೇಕು. ಅದಕ್ಕಾಗಿ ಗವ್ಯೋದ್ಯಮವನ್ನು ಚುರುಕುಗೊಳಿಸುವುದು.

ಗವ್ಯೋತ್ಪನ್ನಗಳ ಹೊಸಹೊಸ ಸಾಧ್ಯತೆಗಳಿಗಾಗಿ ತೀವ್ರತರ ಸಂಶೋಧನೆಗಳನ್ನು ಪ್ರಾರಂಭಿಸುವುದು.

ಅಭಯಧಾಮ, ಅಭಯ ತಹಸೀಲ್, ಅಭಯ ಜಿಲ್ಲೆಗಳನ್ನು ರೂಪಿಸಲು ತಳಮಟ್ಟದ ಕಾರ್ಯವನ್ನು ಆರಂಭಿಸುವುದು.



